# ಶ್ರೀ ವಿ ನಾ ಯ ಕ

Contributed By Sri B.Ramnath



ಹೇರಂಬ ಕುಂಭಲಸಿತಾಮಲಕುಂಕುಮಾಂಕ
ಮಾರಾರಿಪುತ್ರ ಕರಿವಕ್ತ್ರ ಪವಿತ್ರಗಾತ್ರ ।
ಕಾರುಣ್ಯರೂಪ ಸುಕಲಾಪ ಮಹಾಪ್ರತಾಪ
ಪ್ರಾರಬ್ಧಕಾರ್ಯ ಮುರುಧೈರ್ಯ । ಭವೇದವಿಘ್ನಮ್ ॥

ಕುಂಭಸ್ಥಳದಲ್ಲಿ (ಆನೆಯ ಹಣೆಯ ಪ್ರದೇಶದಲ್ಲಿ) ಪ್ರಕಾಶಿಸುವ ನಿರ್ಮಲವಾದ ಕುಂಕುಮದ ಅಲಂಕಾರತಿಲಕವುಳ್ಳ, ಮದನಾರಿಯ ಪುತ್ರನಾದ, ಆನೆಯ ಮುಖವುಳ್ಳ, ಪವಿತ್ರವಾದ ದೇಹವುಳ್ಳ, ಮೂರ್ತಿವೆತ್ತ ದಯೆಯಂತಿರುವ, ಉತ್ತಮವಾದ

ಆಭರಣವುಳ್ಳ, ಮಹಾಪ್ರತಾಪಶಾಲಿಯಾದ, ಮಹಾಧೈರ್ಯಶಾಲಿಯಾದ ಎಲೈ ಹೇರಂಬನೇ (ಗಣೇಶನೇ) । ನಿನ್ನ ಅನುಗ್ರಹದಿಂದ ಕೈಗೊಂಡ ಕಾರ್ಯವು ನಿರ್ವಿಘ್ನವಾಗಿ ನೆರವೇರಲಿ.

( ಶ್ರೀ ಸ ರ ಸ ಭಾ ರ ತೀ ವಿ ಲಾ ಸಃ – ಶ್ರೀ ವಾ ದಿ ರಾ ಜ ರು )

ವಿಘ್ನರಾಜನೆ ದುರ್ವಿಷಯದೊಳು
ಮಗ್ನವಾಗಿಹ ಮನವ ಮಹದೋ–
ಷಘ್ನನಂಘ್ರಿಸರೋಜಯುಗಳದಿ ಭಕ್ತಿಪೂರ್ವಕದಿ
ಲಗ್ನವಾಗಿಸು ನಿತ್ಯನರಕಭ–
ಯಾಗ್ನಿಗಳಿಗಾನಂಜೆ ಗುರುವರ
ಭಗ್ನಗೈಸೆನ್ನವಗುಣಗಳನು ಪ್ರತಿದಿವಸದಲ್ಲಿ

ವಿಘ್ನಗಳನ್ನು ನಾಶಮಾಡುವುದರಲ್ಲಿ ರಾಜನಾದಂಥ ವಿಘ್ನರಾಜನೆ । ಮನಸ್ಸು ದುರ್ವಿಷಯಗಳ (ಅವಗುಣಗಳು ಎಂದರೆ ಪರಮಾತ್ಮ ಪ್ರೀತಿಕರವಲ್ಲದ ದಾರಾಪುತ್ರಾದಿಗಳೇ ತಾರಕರೆಂದು ತಿಳಿದು ಭಗವದ್ ಭಕ್ತರಲ್ಲಿ ಆದರರಹಿತರಾಗಿ ಅವರ ಸನ್ಮಾನಾದಿಗಳನ್ನು ಮಾಡದೆ ಧಿಕ್ಕರಿಸಿ ನಡೆಯುವುದು) ಕಡೆ ಹೋಗದಂತೆಯೂ, ಸದಾ ಪರಮಾತ್ಮನ ಪಾದಾರವಿಂದಗಳನ್ನು ಚಿಂತಿಸುತ್ತಿರುವಂತೆಯೂ ಮಾಡು. ನರಕ–ಅಗ್ನಿ ಮೊದಲಾದವುಗಳಿಗೆ ಹೆದರುವುದಿಲ್ಲ. ಆದರೆ ಮನಸ್ಸು ಎಲ್ಲಿ ದುರ್ವಿಷಯದಲ್ಲಿ (ಹರಿ ಸ್ಮರಣವಿಹೀನರಾಗಿ ಮಾಡಿದರೆ ದುರ್ವಿಷಯ) ತೊಡಗುತ್ತದೋ ಎಂಬ ಹೆದರಿಕೆ ಮಾತ್ರ ಇದೆ.

(ಹರಿಕಥಾಮೃತಸಾರ – ಗಣಪತಿ ಸ್ತೋತ್ರ ಸಂಧಿ)

ರಾ ಗ – ನಾ ಟಿ : ತಾ ಳ – ತ್ರಿ ವಿ ಡೆ ತಾ ಳ

ಶರಣು ಸಿದ್ಧಿವಿನಾಯಕ ಶರಣು ವಿದ್ಯಾಪ್ರದಾಯಕ । ಪ ।

ಶರಣು ಪಾರ್ವತಿತನಯ ಮೂರುತಿ ಶರಣು ಮೂಷಕವಾಹನ । ಅ ಪ ।

ನಿಟಿಲ ನೇತ್ರನ ದೇವಿ ಸುತನೆ ನಾಗಭೂಷಣ ಪ್ರಿಯನೆ
ಕಟಿಕಟಾಂಗದ ಕೋಮಲಾಂಗನೆ ಕರ್ಣಕುಂಡಲಧಾರನೆ । ೧ ।

ಬಟುವ ಮುತ್ತಿನ ಹಾರ ಪದಕನೆ ಬಾಹು ಹಸ್ತಚತುಷ್ಟನೆ
ಇಟ್ಟ ತೊಡಿಗೆಯು ಹೇಮ ಕಂಕಣ ಪಾಶಾಂಕುಶಧಾರನೆ । ೨ ।

ಕುಕ್ಷಿ ಮಹಾಲಂಬೋದರನೆ ಇಕ್ಷುಚಾಪನ ಗೆಲಿದನೆ
ಪಕ್ಷಿವಾಹನ ಸಿರಿಪುರಂದರವಿಟ್ಠಲನ ನಿಜದಾಸನೆ । ೩ ।

ರಾ ಗ – ಪೀ ಲು : ತಾ ಳ – ಆ ದಿ ತಾ ಳ

ಗಜವದನ ಬೇಡುವೆ ಗೌರೀತನಯ ।ಪ।

ತ್ರಿಜಗ ವಂದಿತನೆ ಸುಜನರ ಪೊರೆವನೆ ।ಅ ಪ।

ಪಾಶಾಂಕುಶಧರ ಪರಮ ಪವಿತ್ರ
ಮೂಷಕವಾಹನ ಮುನಿಜನ ಪ್ರೇಮ ।೧।

ಮೋದದಿ ನಿನ್ನಯ ಪಾದವ ತೋರೊ
ಸಾಧು ವಂದಿತನೆ ಆದರದಿಂದಲಿ ।೨।

ಸರಸಿಜನಾಭ ಶ್ರೀ ಪುರಂದರವಿಟ್ಠಲನ
ನಿರುತ ನೆನೆಯುವಂತೆ ದಯಮಾಡೊ ।೩।



ರಾಗ – ದರ್ಬಾರ್ : ತಾಳ – ಅಟತಾಳ

ನಮ್ಮಮ್ಮ ಶಾರದೇ ಉಮಾ ಮಹೇಶ್ವರಿ
ನಿಮ್ಮೊಳಗಿಹನಾರಮ್ಮ ।ಪ।

ಕಮ್ಮಗೋಲನವೈರಿ ಸುತನಾದ ಸೊಂಡಿಲ
ಹೆಮ್ಮೆಯ ಗಣನಾಥನೆ ಅಮ್ಮಯ್ಯ ।ಅ ಪ।

ಮೋರೆಕಪ್ಪಿನ ಭಾವ ಮೊರದಗಲ ಕಿವಿ

ಕೋರೆದಾಡೆಯನಿವನ್ಯಾರಮ್ಮ
ಮೂರು ಕಣ್ಣನಸುತ ಮುರಿದಿಟ್ಟ ಚಂದ್ರನ
ಧೀರ ತಾ ಗಣನಾಥನೇ ಅಮ್ಮಯ್ಯ ।೧।

ಉಟ್ಟದಟ್ಟಿಯು ಬಿಗಿದುಟ್ಟ ಚಲ್ಲಣದ
ದಿಟ್ಟ ತಾನಿವನ್ಯಾರಮ್ಮ
ಪಟ್ಟದ ರಾಣಿ ಪಾರ್ವತಿಯ ಕುಮಾರ
ಹೊಟ್ಟೆಯ ಗಣನಾಥನೆ ಅಮ್ಮಯ್ಯ ।೨।

ರಾಶಿವಿದ್ಯೆಯ ಬಲ್ಲ ರಮಣಿ ಹಂಬಲನೊಲ್ಲ
ಭಾಷಿಗನಿವನ್ಯಾರಮ್ಮ
ಲೇಸಾಗಿ ಸುಜನರ ಸಲಹುವ ನೆಲೆಯಾದಿ-
ಕೇಶವನ ದಾಸ ಕಣೇ ಅಮ್ಮಯ್ಯ ।೩।

ರಾಗ - ಕಮಾಚ್ : ತಾಳ - ಆದಿತಾಳ

ಗಜವದನ ಪಾವನ ವಿಘ್ನನಾಶನ ।ಪ।

ವರಪಾಶಾಂಕುಶಧರ ಪರಮದಯಾಳೊ
ಕರುಣಾಪೂರಿತ ಗೌರಿವರಕುಮಾರನೆ ।೧।

ಸುಂದರವದನ ಅರವಿಂದನಯನ ಘನ-
ಸುಂದರಿ ಕಂದನೆ ಬಂದು ರಕ್ಷಿಸೊ ।೨।

ಗೋಪಾಲವಿಟ್ಠಲನ ಅಪಾರ ಭಜಕನೆ
ಶಾಪಾನುಗ್ರಹಶಕ್ತ ಅನೇಕ ಮಹಿಮ ।೩।

ರಾಗ - ನಾಟಿ : ತಾಳ - ಆದಿತಾಳ

ಗಜಮುಖ ವಂದಿಸುವೆ ಕರುಣಿಸಿ ಕಾಯೊ ।ಪ।

ಗಜಮುಖ ವಂದಿಪೆ ಗಜಗೌರಿಯ ಪುತ್ರ
ಅಜನ ಪಿತನ ಮೊಮ್ಮಗನ ಮೋಹದ ಬಾಲ ।ಅ ಪ।

ನೀಲಕಂಠನ ಸುತ ಬಾಲ ಗಣೇಶನೆ
ಬಾರಿ ಬಾರಿಗೆ ನಿನ್ನ ಭಜನೆ ಮಾಡುವೆನಯ್ಯ ।೧।

ಪರುವತನ ಪುತ್ರಿ ಪಾರ್ವತಿಯ ಕುಮಾರ
ಗರುವಿಯಾ ಚಂದ್ರಗೆ ಸ್ಥಿರಶಾಪ ಕೊಟ್ಟನೆ ।೨।

ಹರಿಹರರು ನಿನ್ನ ಚರಣ ಪೂಜೆಯ ಮಾಡಿ
ದುರುಳ ಕಂಟಕರನು ತರಿದು ಬಿಸುಡಿದರಯ್ಯ ।೩।

ಮತಿಗೆಟ್ಟ ರಾವಣ ಪೂಜಿಸದೆ ಸೀತಾ–
ಪತಿ ಕರದಿಂದಲಿ ಹತವಾಗಿ ಪೋದ ।೪।

ವಾರಿಜನಾಭ ಶ್ರೀ ಹಯವದನನ ಪದ
ಸೇರುವ ಮಾರ್ಗದ ದಾರಿಯ ತೋರೊ ।೫।

ರಾಗ – ಮೋಹನ : ತಾಳ – ಆದಿತಾಳ

ಗಣಪತಿ ಎನ್ನ ಪಾಲಿಸೊ। ಗಂಭೀರ ।ಪ।

ಪಾರ್ವತಿನಂದನ ಸುಂದರವದನ
ಶರ್ವಾದಿಸುರಪ್ರಿಯ ಶಿರಬಾಗುವೆನು ।೧।

ಆದಿಪೂಜಿತ ನೀನು ಮೋದ ಭಕ್ತರಿಗಿತ್ತು
ಮಾಧವನಲಿ ಮನ ಸದಾ ನಿಲಿಸು ನೀ । ೨ ।

ಪಂಕಜನಯನ ಶ್ರೀವೆಂಕಟವಿಟ್ಠಲನ
ಕಿಂಕರನೆನಿಸೆನ್ನ ಶಂಕರತನಯನೆ । ೩ ।

ರಾ ಗ – ನಾ ಟಿ : ತಾ ಳ – ಝ ಂ ಪೆ ತಾ ಳ

ಗಜಮುಖನೆ ಸಿದ್ಧಿದಾಯಕನೆ ವಂದಿಪೆ ಶರಣು । ಪ ।



ತ್ರಿಜಗವಂದಿತನಾದ ದೇವದೇವನೆ ಶರಣು
ಸುಜನರಿಗೆ ವಿಘ್ನವನು ಪರಿಹರಿಪೆ ಶರಣು । ಅ ಪ ।

ಮಂದಮತಿಯನು ಬಿಡಿಸಿ ಚಂದ ಜ್ಞಾನವನಿತ್ತು
ಇಂದಿರೇಶನ ಪಾದ ಪೊಂದಿಪ್ಪ ತೆರದಿ
ಸುಂದರಾಂಗನೆ ನಿನ್ನ ಪದದ್ವಂದ್ವಕೆರುಗುವೆನೊ
ಸಂದೇಹ ಮಾಡದಲೆ ಇಂದು ಕರುಣಿಪುದು । ೧ ।

ಹರನ ತನಯನೆ ಕರುಣಾಕರನೆ ಸುರನರವರದ
ಮೊರೆಯ ಲಾಲಿಸಿ ಎನ್ನ ಕರಗಳನೆ ಪಿಡಿದು

ಪೊರೆಯದಿದ್ದರೆ ಬಿಡೆನು ನೆರೆದೆ ನಿನ್ನಡಿಗಳನು
ತ್ವರಿಯದಿಂದಲಿ ನೋಡು ಶರಣೆಂಬೆ ನಿನಗೆ ।೨।

ಸಿದ್ಧಿದಾಯಕ ನಿನ್ನ ಪೊದ್ದಿ ಮೆರೆವೆನೊ ನಾನು
ಅಬ್ಧಿಶಯನನ ಮಹಿಮೆ ಒದ್ದದಲಿ ಪೇಳ್ವ
ಶುದ್ಧಮತಿಯನು ಕೊಟ್ಟು ಉದ್ಧರಿಸಬೇಕೆನ್ನ
ಮಧ್ವವಲ್ಲಭ ವೇಣುಕೃಷ್ಣಗತಿಪ್ರಿಯ ।೩।



ರಾಗ – ಪೂರ್ವಿ : ತಾಳ – ಝಂಪೆ ತಾಳ

ನಂಬಿದೆನೊ ನಿನ್ನ ಪಾದ ಲಂಬೋದರ ।
ಅಂಬರಾಧಿಪ ಮನದ್ವಂಬಲವ ನೀಡೆಂದು ।ಪ।

ನಾಕನಾಥನುತ ಪಿನಾಕಿಸುತ ।
ಕಾಕು ಮತಿಯ ಕಳೆದು ಕಾಯೋ
ಆಖುವಾಹನ ಏಕದಂತ ।೧।

ಭದ್ರ ಮೂರುತಿಯೇ ಕರುಣಾಬ್ಧಿ ತ್ವರಿತ ।
ಉದ್ಧರಿಸುಯೆಂದು ನಮಿಪೆ
ಅದ್ರಿಜೆ ಕುಮಾರ ನಿರುತ ।೨।

ಸಿಂಧೂರ ವರದನ ಸುರವೃಂದ ವಂದಿತ ।
ವಂದಿಸಿ ಬೇಡುವೆ ಶ್ಯಾಮ-
ಸುಂದರನ ಪ್ರೀತಿಪಾತ್ರ ।೩।



ರಾಗ - ಪಂತುವರಾಳಿ : ತಾಳ - ಅಟತಾಳ

ಅಂಬಾತನಯ ಹೇ ಹೇರಂಬ ।ಪ।

ಕರುಣಾಂಬುಧೆ ತವ ಚರಣಾಂಬುಜಕೆರಗುವೆ ।ಅ ಪ।

ದಶನ ಮೋದಕ ಪಾಶಾಂಕುಶ ಪಾಣೆ
ಅಸಮ ನೀ ಚಾರುದೇಷ್ಣ ವಂದಿಪೆ ।೧।

ವೃಂದಾರಕ ವೃಂದವಂದಿತ ಚರಣಾರ-
ವಿಂದಯುಗಳ ದಯದಿಂದ ನೋಡು ಎನ್ನ ।೨।

ಯೂಥಪ ವದನ ಪ್ರದ್ಯೋತ ಸನ್ನಿಭ ಜಗ
ನ್ನಾಥವಿಟ್ಠಲನ್ನ ಸಂಪ್ರೀತಿ ವಿಷಯ ಜಯ ।೩।

ರಾಗ - ಬೇಹಾಗ್ : ತಾಳ - ಆದಿತಾಳ

ಭುಜಗ ಭೂಷಣ ಕರುಣ । ಗಜಾನನ । ಪ ।

ಅಂಬರಕಭಿಮಾನಿ ಶಂಭುದೇವನ ಸುತ
ಇಂಬು ತೋರಿಸೊ ನೀ ವಿಶ್ವಂಭರನ ಸ್ಮರಣೆಗೆ । ೧ ।

ದಾಸವರ್ಯನೆ ವೇದವ್ಯಾಸರಿಗತಿಪ್ರಿಯ
ದಾಸನೆಂದೆನಿಸೆನ್ನ ಭೇಷ ಮೂರುತಿಯೆ । ೨ ।

ಮತಿಯ ಪಾಲಿಸು ಶ್ರೀಪತಿಯ ಸ್ತುತಿಗೆ ವಿಘ್ನ
ತತಿಯ ತಾರದೆ ಶುಭಮತಿಯ ಇತ್ತು ಸಲಹೊ । ೩ ।

ತತುವರೊಳಗೆ ಅತುಳ ಮಹಿಮನೆಂದು
ಪ್ರಥಮ ಕಾರ್ಯದಿ ನಿನ್ನ ನುತಿಸಿ ಬೇಡುವರು । ೪ ।

ಶ್ರುತಿಪಾದ್ಯ ಶ್ರೀ ವೆಂಕಟೇಶನ ದೂತ
ಹಿತರೆನಗಿಲ್ಲ ನೀ ಗತಿಯೆಂದು ನಂಬಿದೆ । ೫ ।

Sri Krishnarpanamastu